**O.S. 121-20 DW-2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 17.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಹೆಚ್ ಹೆಚ್ ವಕೀಲರಿಂದಃ**

2. ನನ್ನ ಗಂಡನ ಹೆಸರು ರುದ್ರಪ್ಪ ಅರಕೇರಿ. ನನಗೆ 3 ಜನ ಮಕ್ಕಳಿದ್ದು ಅವರ ಹೆಸರು ನಾಗರತ್ನ, ಮಂಜನಾಥ ಹಾಗೂ ರವಿ. ನನ್ನ ಗಂಡನ ತಂದೆ ಹೆಸರು ರೇವಣಪ್ಪ. ನನ್ನ ಗಂಡನಿಗೆ ಅಕ್ಕ - ತಂಗಿಯರು 2 ಜನ ಇದ್ದಾರೆ.

3. ನಮಗೆ ಶೇತ್ಕಿ ಜಮೀನು ಇತ್ತು. ಶಾಲೆ ಕಲಿತಿಲ್ಲ. ಹೀಗಾಗಿ ಸರ್ವೆ ನಂಬರ ಗೊತ್ತಿಲ್ಲ. ರಾಯನಾಳ ಗ್ರಾಮದಲ್ಲಿ 1 ಎಕರೆ ಜಮೀನು ಇತ್ತು. ಅದರ ಸರ್ವೆ ನಂಃ 79/5 ಅಂದರೆ ಸರಿ. ಸದರಿ 1 ಎಕರೆ ಜಮೀನು ಮೊದಲು ನಮ್ಮ ಮಾವನ ಹೆಸರಿನಲ್ಲಿತ್ತು. ನಂತರ ಈಗ ನನ್ನ ಗಂಡನ ಹೆಸರಿಲ್ಲಿದೆ. ನನ್ನ ಗಂಡ ಸದರಿ ಜಮೀನನ್ನು ಮಾರಾಟ ಮಾಡಿಲ್ಲ. ನನ್ನ ಗಂಡ ಪ್ಲಾಟ ಮಾಡಲು ಕೊಟ್ಟಿದ್ದೇನೆ ಎಂದು ಹೇಳಿದರು. ಇದನ್ನು ಯಾರಿಗೆ ಕೊಟ್ಟಿದ್ದರು ಹಾಗೂ ಯಾವ ರೀತಿ ಕೊಟ್ಟಿದ್ದರೆಂದು ಹೇಳಿಲ್ಲ.

4. ಈ ಕೇಸನ್ನು ನಮ್ಮ ಮಕ್ಕಳು ಹಾಕಿದ್ದಾರೆ. ಬೋರ ಹಾಕಿಸಲು ದಾಖಲೆ ತೆಗೆದಾಗ ಅವರ ತಂದೆ ಮಾರಾಟ ಮಾಡಿದ ವಿಷಯ ಗೊತ್ತಾಗಿ ಅವರ ತಂದೆ ಜೊತೆ ಕಿರಿಕಿರಿ ಮಾಡಿ ಈ ದಾವೆ ಸಲ್ಲಿಸಿದ್ದಾರೆ. ನಮ್ಮನ್ನು ಕೇಳದೆ ಮಾರಾಟ ಮಾಡಿದ್ದಾನೆಂದು ಕಿರಿಕಿರಿ ಮಾಡಿದ್ದಾರೆ. ಈಗ ನನ್ನ ಗಂಡ 2 ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ. ಮಕ್ಕಳು ಕಿರಿಕಿರಿ ಮಾಡಿದ ಕಾರಣ ನನ್ನ ಗಂಡ ಬೇಜಾರಾಗಿ ಮರಣ ಹೊಂದಿದ್ದಾರೆ. ನನ್ನ ಗಂಡ ವಿಷ ಕುಡಿದು ಆತ್ಮಹತ್ಯೆಮಾಡಿಕೊಂಡಿದ್ದಾರೆ.

5. ದಾವಾ ಆಸ್ತಿ ನನ್ನ ಮಾವನ ಆಸ್ತಿ. ದಾವಾ ಆಸ್ತಿಯಲ್ಲಿ ನಮ್ಮ ಮಕ್ಕಳಿಗೆ ಹಕ್ಕು ಇದೆ ಅಂದರೆ ಸರಿ. ನನ್ನ ಗಂಡ ಮಕ್ಕಳ ಅನುಮತಿ ಇಲ್ಲದೆ ವ್ಯವಹಾರ ಮಾಡಿದ್ದು ಅದು ಮಕ್ಕಳಿಗೆ ಬಾಂಧಾಯಿಸುವುದಿಲ್ಲ ಅಂದರೆ ಗೊತ್ತಿಲ್ಲ.

**O.S. 121-20** **DW-2**

6. ನಾನು ದಾವಾ ಆಸ್ತಿಯಲ್ಲಿ ಸೋಯಾಬಿನ್ ಬೆಳೆಯುತ್ತಿದ್ದೇನೆ. ಈಗಲೂ ನನ್ನ ಮಕ್ಕಳು ವಾದಿಗಳು ದಾವಾ ಆಸ್ತಿಯಲ್ಲಿ ಸೋಯಾಬಿನ್ ಮೊದಲಿನಿಂದ ಹಾಗೂ ಈಗಲು ಬೆಳೆಯುತ್ತಿದ್ದಾರೆ ಅಂದರೆ ಸರಿ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.